## ಕರ್ನಾಟಕ ವಿಧಾನ ಪರಿಷತ್ತು

### ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್ ರವರು ನಿಯಮ-72ರ ಅಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ:57.

**ವಿಷಯ:** ಕಲಬುರಗಿ ಜಿಲ್ಲೆಯ ವ್ಯಾಪ್ತಿಯಲ್ಲಿರುವ ರಾಷ್ಟ್ರೀಯ / ರಾಜ್ಯ / ಜಿಲ್ಲಾ ಹೆದ್ದಾರಿಗಳ ಕಳಪೆ ಗುಣಮಟ್ಟದ ಕಾಮಗಾರಿಗಳಿಂದ ಹಾಗೂ ಅವೈಜ್ಞಾನಿಕ ರಸ್ತೆ ತಿರುವುಗಳಿಂದ ರಸ್ತೆ ಅಪಘಾತಗಳು ಹೆಚ್ಚುತ್ತಿರುವ ಬಗ್ಗೆ ಸರ್ಕಾರದ ಗಮನ ಸೆಳೆಯ ಬಯಸುತ್ತೇನೆ.

********

### ಸರ್ಕಾರದ ಉತ್ತರ

ಕಲಬುರಗಿ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ-150 (ಕಲಬುರಗಿ-ವಾಡಿ-ಯಾದಗಿರಿ-ಕಡೆಚೂರು-ತೆಲಂಗಾಣ ಗಡಿ), 150(ಇ) (ಕಲಬುರಗಿ-ಅಫಜಲಪೂರ-ಮಹಾರಾಷ್ಟ್ರ ಗಡಿ) ಹಾಗೂ 167(ಎನ್) (ತೆಲಂಗಾಣ ಗಡಿ-ಚಿಂಚೋಳಿ-ಬಾಪೂರ) ರಸ್ತೆಗಳು ಹಾದುಹೋಗಿರುತ್ತವೆ. ರಸ್ತೆವಾರು ಮಾಹಿತಿಯು ಈ ಕೆಳಕಂಡಂತಿದೆ.

**ಅ) ರಾಷ್ಟ್ರೀಯ ಹೆದ್ದಾರಿ-150 (ಕಲಬುರಗಿ-ವಾಡಿ-ಯಾದಗಿರಿ-ಕಡೆಚೂರು-ತೆಲಂಗಾಣ ಗಡಿ):-**

ರಾಷ್ಟ್ರೀಯ ಹೆದ್ದಾರಿ-150 ರಸ್ತೆಯು ಕಲಬುರಗಿ ಜಿಲ್ಲೆಯಲ್ಲಿ ಹಾದುಹೋಗಿರುವ ಮತ್ತೊಂದು ರಾಷ್ಟ್ರೀಯ ಹೆದ್ದಾರಿ-50ರ ಜಂಕ್ಷನ್ (ರಾಜಾಪೂರ ಕ್ರಾಸ್) ದಿಂದ ಪ್ರಾರಂಭವಾಗಿ ವಾಡಿ, ಯಾದಗಿರಿ, ಕಡೆಚೂರು ಮಾರ್ಗವಾಗಿ ತೆಲಂಗಾಣ ಗಡಿಯನ್ನು ಸೇರುತ್ತದೆ. ಈ ರಸ್ತೆಯು ಕಲಬುರಗಿ ಜಿಲ್ಲೆಯ ವ್ಯಾಪ್ತಿಯಲ್ಲಿ ಕಿಮೀ 0.000 ರಿಂದ ಕಿಮೀ 53.000 ರವರೆಗೆ ಒಟ್ಟು 53 ಕಿಮೀ ಉದ್ದ ಹಾದುಹೋಗಿರುತ್ತದೆ.

ಈ ರಸ್ತೆಯ ಕಿಮೀ 0.000 ರಿಂದ ಕಿಮೀ 34.000 ರವರೆಗಿನ ರಸ್ತೆಯ ಮರು ಡಾಂಬರೀಕರಣಕ್ಕಾಗಿ ದಿನಾಂಕ:01.02.2024 ರಂದು ಪ್ರಾದೇಶಿಕ ಅಧಿಕಾರಿಗಳು, ಕೇಂದ್ರ ರಸ್ತೆ ಸಾರಿಗೆ ಹಾಗೂ ಹೆದ್ದಾರಿಗಳ ಮಂತ್ರಾಲಯ, ಬೆಂಗಳೂರು ಇವರಿಂದ ಟೆಂಡರ್ ಕರೆಯಲಾಗಿದ್ದು, ದಿನಾಂಕ: 15.02.2024 ರಂದು ಟೆಂಡರ್ ಸಲ್ಲಿಸಲು ಕೊನೆಯ ದಿನವಾಗಿರುತ್ತದೆ.

ಉಳಿದಂತೆ ರಸ್ತೆಯ ಕಿಮೀ.34.00 ರಿಂದ ಕಿಮೀ.53.00 ರವರೆಗಿನ ರಸ್ತೆಯ ಭಾಗವನ್ನು 2016-17ನೇ ಸಾಲಿನ ಕೇಂದ್ರ ರಸ್ತೆ ಸಾರಿಗೆ ಹಾಗೂ ಹೆದ್ದಾರಿಗಳ ಮಂತ್ರಾಲಯದ ಅನುದಾನದಲ್ಲಿ ಇ.ಪಿ.ಸಿ. ಮಾದರಿಯಲ್ಲಿ ರಸ್ತೆಯ ಅಗಲೀಕರಣ/ಮರುನಿರ್ಮಾಣವನ್ನು ವೈಜ್ಞಾನಿಕವಾಗಿ ವಿನ್ಯಾಸಿಸಿ ರಸ್ತೆ ಅಭಿವೃದ್ಧಿ ಕೆಲಸವನ್ನು ಕೈಗೊಳ್ಳಲಾಗಿರುತ್ತದೆ.

ಅಲ್ಲದೆ ಸದರಿ ರಸ್ತೆಯ ಕೆಲವು ಭಾಗಗಳಲ್ಲಿ ಬರುವ ಗ್ರಾಮ/ಪಟ್ಟಣಗಳ ವ್ಯಾಪ್ತಿಗಳಲ್ಲಿನ ಅವೈಜ್ಞಾನಿಕ ರಸ್ತೆ ತಿರವುಗಳನ್ನು ಹಾಲಿಯಿರುವ ಐ.ಆರ್.ಸಿ. ಮಾನದಂಡಗಳನ್ವಯ ಸುಧಾರಣೆ ಕ್ರಮಗಳನ್ನು ಅಳವಡಿಸುವ ನಿಟ್ಟಿನಲ್ಲಿ ಕ್ರಮವಹಿಸಲಾಗುತ್ತಿದೆ.

**ಆ) ರಾಷ್ಟ್ರೀಯ ಹೆದ್ದಾರಿ-150(ಇ) (ಕಲಬುರಗಿ-ಅಫಜಲಪೂರ-ಮಹರಾಷ್ಟ್ರ ಗಡಿ):-**

ರಾಷ್ಟ್ರೀಯ ಹೆದ್ದಾರಿ-150(ಇ) ರಸ್ತೆಯು ಕಲಬುರಗಿ ಜಿಲ್ಲೆಯಲ್ಲಿ ಹಾದುಹೋಗಿರುವ ಮತ್ತೊಂದು ರಾಷ್ಟ್ರೀಯ ಹೆದ್ದಾರಿ-50ರ ಜಂಕ್ಷನ್ (ಹುಮನಾಬಾದ ಬೇಸ್) ದಿಂದ ಪ್ರಾರಂಭವಾಗಿ ಚವಾಡಪೂರ, ಅಫಜಲಪೂರ, ಬಳ್ಳೂರಗಿ ಮಾರ್ಗವಾಗಿ ಮಹಾರಾಷ್ಟ್ರ ಗಡಿಯನ್ನು ಸೇರುತ್ತದೆ. ಈ ರಸ್ತೆಯು ಕಲಬುರಗಿ

ಜಿಲ್ಲೆಯ ವ್ಯಾಪ್ತಿಯಲ್ಲಿ ಕಿಮೀ 0.000 ರಿಂದ ಕಿಮೀ 72.920 ರವರೆಗೆ ಒಟ್ಟು 72.92 ಕಿಮೀ ಉದ್ದ ಹಾದುಹೋಗಿರುತ್ತದೆ.

ಈ ರಸ್ತೆಯ ಕಿಮೀ 0.000 ರಿಂದ ಕಿಮೀ 9.000 ರವರೆಗೆ ಈಗಾಗಲೇ ಮರು ಡಾಂಬರೀಕರಣ ಮಾಡಲಾಗಿದ್ದು, ಕಿಮೀ 9.00 ರಿಂದ ಕಿಮೀ 62.950 ರವರೆಗಿನ (ಆಯ್ದ ಭಾಗಗಳಲ್ಲಿ) ರಸ್ತೆಯ ಮರು ಡಾಂಬರೀಕರಣಕ್ಕಾಗಿ ಗುತ್ತಿಗೆಯನ್ನು ನಿಗದಿಪಡಿಸಲಾಗಿದ್ದು, ಅದರಂತೆ ಕಾಮಗಾರಿಯನ್ನು ಸಕಾಲದಲ್ಲಿ ಪ್ರಾರಂಭಿಸಲು ಅಗತ್ಯ ಕ್ರಮವಹಿಸಲಾಗಿದೆ.

ಹಾಗೂ ಕಿಮೀ 62.950 ರಿಂದ ಕಿಮೀ 72.920 ರವರೆಗಿನ ರಸ್ತೆ ಮರು ಡಾಂಬರೀಕರಣಕ್ಕಾಗಿ ದಿನಾಂಕ:01.02.2024 ರಂದು ಪ್ರಾದೇಶಿಕ ಅಧಿಕಾರಿಗಳು, ಕೇಂದ್ರ ರಸ್ತೆ ಸಾರಿಗೆ ಹಾಗೂ ಹೆದ್ದಾರಿಗಳ ಮಂತ್ರಾಲಯ, ಬೆಂಗಳೂರು ಇವರಿಂದ ಟೆಂಡರ್ ಕರೆಯಲಾಗಿದ್ದು, ದಿನಾಂಕ: 15.02.2024 ರಂದು ಟೆಂಡರ್ ಸಲ್ಲಿಸಲು ಕೊನೆಯ ದಿನವಾಗಿರುತ್ತದೆ.

ಮುಂದುವರೆದು ಈ ರಸ್ತೆಯ ಚವಾಡಪೂರ, ಅಫಜಲಪೂರ ಹಾಗೂ ಬಳ್ಳೂರಗಿ ಭಾಗಗಳಲ್ಲಿನ ಅವೈಜ್ಞಾನಿಕ ರಸ್ತೆ ತಿರುವುಗಳನ್ನು ವಾಹನ ಸಂಚಾರ ದಟ್ಟಣೆಗೆ ಅನುಗುಣವಾಗಿ ವೈಜ್ಞಾನಿಕವಾಗಿ ವಿನ್ಯಾಸಿಸಿ ಬೈಪಾಸ್ ಮಾದರಿಯ ರಸ್ತೆಯ ಅಲೈನ್‌ಮೆಂಟ್ ಸುಧಾರಣೆ ಕ್ರಮಗಳನ್ನು ಅಳವಡಿಸಿಕೊಂಡ ಇ.ಪಿ.ಸಿ ಕಾಮಗಾರಿಯು ಪ್ರಸ್ತುತ ಪ್ರಗತಿಯಲ್ಲಿರುತ್ತದೆ.

ಆದಾಗ್ಯೂ ಸದರಿ ರಸ್ತೆಯ ಇನ್ನುಳಿದ ಭಾಗಗಳಲ್ಲಿ ಬರುವ ಗ್ರಾಮ/ಪಟ್ಟಣಗಳ ವ್ಯಾಪ್ತಿಗಳಲ್ಲಿನ ಅವೈಜ್ಞಾನಿಕ ರಸ್ತೆ ತಿರುವುಗಳನ್ನು ಹಾಲಿಯಿರುವ ಐ.ಆರ್.ಸಿ. ಮಾನದಂಡಗಳನ್ವಯ ಸುಧಾರಣೆ ಕ್ರಮಗಳನ್ನು ಅಳವಡಿಸುವ ನಿಟ್ಟಿನಲ್ಲಿ ಕ್ರಮವಹಿಸಲಾಗುತ್ತಿದೆ.

**ಇ) ರಾಷ್ಟ್ರೀಯ ಹೆದ್ದಾರಿ–167(ಎನ್) (ತೆಲಂಗಾಣ ಗಡಿ–ಚಿಂಚೋಳಿ–ಬಾಪೂರ):–**

ನೂತನವಾಗಿ ಮೇಲ್ದರ್ಜೆಗೇರಿಸಲಾದ ರಾಷ್ಟ್ರೀಯ ಹೆದ್ದಾರಿ–167(ಎನ್) ರಸ್ತೆಯು ತೆಲಂಗಾಣ ಗಡಿ ಹತ್ತಿರದ ಮಿರ್ಯಾಣದಿಂದ ಪ್ರಾರಂಭವಾಗಿ ಚಿಂಚೋಳಿ ಮುಖಾಂತರ ಬಾಪೂರ ಹತ್ತಿರದ ರಾಷ್ಟ್ರೀಯ ಹೆದ್ದಾರಿ–65ಕ್ಕೆ ಸೇರುತ್ತದೆ. ಈ ರಸ್ತೆಯು ಕಲಬುರಗಿ ಜಿಲ್ಲೆಯಲ್ಲಿ ಕಿಮೀ 0.000 ರಿಂದ ಕಿಮೀ 33.000 ರವರೆಗೆ ಒಟ್ಟು 33.00 ಕಿಮೀ ಉದ್ದ ಹಾದುಹೋಗಿರುತ್ತದೆ.

ಈ ರಸ್ತೆಯ ಕಿಮೀ 0.000 ರಿಂದ ಕಿಮೀ 15.85 ರವರೆಗೆ ನಾಲ್ಕು ಪಥದ ರಸ್ತೆಯನ್ನಾಗಿ ಅಗಲೀಕರಣ/ಮರುನಿರ್ಮಾಣದ ವೈಜ್ಞಾನಿಕ ವಿನ್ಯಾಸದ ವಿಸ್ತೃತ ಯೋಜನಾ ವರದಿಗೆ ಇತ್ತೀಚೆಗೆ ಕೇಂದ್ರ ರಸ್ತೆ ಸಾರಿಗೆ ಹಾಗೂ ಹೆದ್ದಾರಿಗಳ ಮಂತ್ರಾಲಯದಿಂದ ಅನುಮೋದನೆ ನೀಡಲಾಗಿದ್ದು, ಅದರಂತೆ ಪ್ರಾದೇಶಿಕ ಅಧಿಕಾರಿಗಳು, ಕೇಂದ್ರ ರಸ್ತೆ ಸಾರಿಗೆ ಹಾಗೂ ಹೆದ್ದಾರಿಗಳ ಮಂತ್ರಾಲಯ, ಬೆಂಗಳೂರು ಇವರು ಟೆಂಡರ್ ಕರೆದು, ಗುತ್ತಿಗೆ ನೇಮಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮವಹಿಸಿರುತ್ತಾರೆ.

ಉಳಿದ ರಸ್ತೆಯ ಕಿಮೀ 15.850 ರಿಂದ ಕಿಮೀ 33.000 ರವರೆಗಿನ ರಸ್ತೆಯನ್ನು **KRDCL** ವತಿಯಿಂದ **MoRTH Specification** ಗೆ ಅನುಗುಣವಾಗಿ ಅಗಲೀಕರಣ ಮಾಡಿ ದ್ವಿ–ಪಥದ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲಾಗಿದ್ದು, ಕಾಮಗಾರಿ ನಿರ್ವಹಣೆ ಅವಧಿಯಲ್ಲಿ ಇರುತ್ತದೆ.

**ಜಿಲ್ಲಾ ಮುಖ್ಯ ರಸ್ತೆ ಹಾಗೂ ರಾಜ್ಯ ಹೆದ್ದಾರಿಯ ವಿವರಗಳು :**

ಕಲಬುರಗಿ ಜಿಲ್ಲೆಯ ವ್ಯಾಪ್ತಿಯಲ್ಲಿ ಒಟ್ಟು 1880.30 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಯಿದ್ದು, ಇದರಲ್ಲಿ 665.83 ಕಿ.ಮೀ. ಉದ್ದದ ರಸ್ತೆಯು ಸುಸ್ಥಿತಿಯಲ್ಲಿದ್ದು, ವಾಹನ ಸಂಚಾರಕ್ಕೆ ಯೋಗ್ಯವಾಗಿರುತ್ತದೆ. ಉಳಿದ 1214.47 ಕಿ.ಮೀ. ಉದ್ದಕ್ಕೆ ವಾರ್ಷಿಕ ನಿರ್ವಹಣೆಯನ್ನು ಕೈಗೊಳ್ಳಲು ಕ್ರಮ ವಹಿಸಲಾಗುತ್ತಿದೆ.

ಕಲಬುರಗಿ ಜಿಲ್ಲೆಯ ವ್ಯಾಪ್ತಿಯಲ್ಲಿ ಒಟ್ಟು 1529.13 ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆಯಿದ್ದು, ಇದರಲ್ಲಿ 440.13 ಕಿ.ಮೀ. ಉದ್ದದ ರಸ್ತೆಯು ಸುಸ್ಥಿತಿಯಲ್ಲಿದ್ದು, ವಾಹನ ಸಂಚಾರಕ್ಕೆ ಯೋಗ್ಯವಾಗಿರುತ್ತದೆ. ಉಳಿದ 1089.00 ಕಿ.ಮೀ. ಉದ್ದಕ್ಕೆ ವಾರ್ಷಿಕ ನಿರ್ವಹಣೆಯನ್ನು ಕೈಗೊಳ್ಳಲು ಕ್ರಮ ವಹಿಸಲಾಗುತ್ತಿದೆ.

ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಅವೈಜ್ಞಾನಿಕ S Curve ರಸ್ತೆ ತಿರುವುಗಳನ್ನು ಗುರುತಿಸಿ, ರಸ್ತೆ ಅಪಘಾತಗಳು ಸಂಭವಿಸದಂತೆ ರಸ್ತೆ ಸುರಕ್ಷತಾ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮ ವಹಿಸಲಾಗುವುದು.

ಕಾಮಗಾರಿಯನ್ನು Specification ಗೆ ಅನುಗುಣವಾಗಿ ನಿರ್ವಹಿಸಲಾಗುತ್ತಿದ್ದು, ಕಳಪೆ ಗುಣಮಟ್ಟದ ಯಾವುದೇ ಕಾಮಗಾರಿಗಳು ಆಗಿರುವುದಿಲ್ಲ ಹಾಗೂ ಲೋಕೋಪಯೋಗಿ ಇಲಾಖೆ ರಸ್ತೆ ಕಾಮಗಾರಿಗಳಿಗೆ ಗುಣ ಭರವಸೆ ಇಲಾಖೆಯಿಂದ ಕಾಮಗಾರಿಗಳ ಗುಣಮಟ್ಟ ಕಾಯ್ದುಕೊಳ್ಳಲು ಹಂತ ಹಂತವಾಗಿ ಪರಿವೀಕ್ಷಣೆ ಮಾಡಲಾಗುತ್ತಿದೆ.

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

ಸಂಖ್ಯೆ: ಲೋಇ 15 ಸಿಐಎಸ್ 2024 (ಇ)

ಸತೀಶ ಜಾರಕಿಹೊಳಿ
ಲೋಕೋಪಯೋಗಿ ಸಚಿವರು